# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-107/2017/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 20/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಮರುಳಸಿದ್ದಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (2) ಶ್ರೀ.ಹರೀಶ್, ತಾಂತ್ರಿಕ ಸಹಾಯಕರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (3) ಶ್ರೀಮತಿ.ಲತಾ, ಅಧ್ಯಕ್ಷರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ಮತ್ತು (4) ಶ್ರೀ.ನೀಲಪ್ಪ, ಸದಸ್ಯರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ.ನಾಗರಾಜ್ ಬಿನ್ ನಿಂಗಪ್ಪ, ಚಿಕ್ಕ ಅರಕೆರೆ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಮರುಳಸಿದ್ದಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (2) ಶ್ರೀ.ಲಕ್ಷ್ಮೀಪತಿ, ಕಾರ್ಯನಿರ್ವಾಹಕ ಅಧಿಕಾರಿ, ಜಗಳೂರು ತಾಲ್ಲೂಕು, (3) ಶ್ರೀ.ಹರೀಶ್, ತಾಂತ್ರಿಕ ಸಹಾಯಕರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (4) ಶ್ರೀಮತಿ.ಲತಾ, ಅಧ್ಯಕ್ಷರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ಮತ್ತು (5) ಶ್ರೀ.ನೀಲಪ್ಪ, ಸದಸ್ಯರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ಪ್ರಪತ್ರ-1 ರಲ್ಲಿ ಗುತ್ತಿದುರ್ಗ ಪಂಚಾಯತ್ ವ್ಯಾಪ್ತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯನ್ವಯ ಚಿಕ್ಕಅರಕೆರೆ-ಚದುರಗುಳ್ಳ ಕೆರೆ ಅಂಚಿನ ನಕಾಶೆಯಲ್ಲಿ ರಂಗಪ್ಪನ ಜಮೀನಿನವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ, ಚಿಕ್ಕಅರಕೆರೆ ಗ್ರಾಮದ ಚೌಡಮ್ಮ ಕೋಂ ಕೆಂಚಪ್ಪ ಇವರ ಜಮೀನಿನ ಹತ್ತಿರ ಫೀಡರ್ ಛಾನಲ್ ಮತ್ತು ಚಿಕ್ಕಅರಕೆರೆ ಸ.ನಂ.78 ರ ಪಕ್ಕದಲ್ಲಿರುವ ಸರ್ಕಾರಿ ಹಳ್ಳಕ್ಕೆ ಫೀಡರ್ ಛಾನಲ್ ಕಾಮಗಾರಿಗಳನ್ನು ಜೆ.ಸಿ.ಬಿ.ಯಂತ್ರದ ಸಹಾಯದಿಂದ ಮಾಡಿ, ಸುಳ್ಳು ಎನ್.ಎಂ.ಆರ್, ಎಂ.ಬಿ, ಮತ್ತು ಎಂ.ಐ.ಎಸ್. ವರದಿ ಮಾಡಿ ಹಣವನ್ನು ಬಿಡಿಸಿಕೊಂಡಿರುತ್ತಾರೆ. ಇದರಿಂದ ನಿಜವಾದ ಕೂಲಿ ಕಾರ್ಮಿಕರಿಗೆ ತೊಂದರೆಯಾಗಿರುತ್ತದೆಯೆಂದು ಆಪಾದಿಸಿ ಮೇಲ್ಕಂಡ ಕಾಮಗಾರಿಗಳ ಬಗ್ಗೆ ಸ್ಥಳ ಪರಿಶೀಲನೆ

ನಡೆಸಿ ದಸ್ತಾವೇಜುಗಳನ್ನು ಪರಿಶೀಲಿಸಿ, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು (ಪ್ರಭಾರ) ಕರ್ನಾಟಕ ಲೋಕಾಯುಕ್ತ ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

i. ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಗುತ್ತಿದುರ್ಗ ಗ್ರಾಮಪಂಚಾಯಿತಿ ಪಿ.ಡಿ.ಓ.ರವರಾದ ಮರುಳಸಿದ್ದಪ್ಪ ಇವರು ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಹಾಗೂ ತಾಂತ್ರಿಕ ಸಹಾಯಕರಾದ ಹರೀಶ್ ಇವರೊಂದಿಗೆ ಸೇರಿಕೊಂಡು ಅರ್ಜಿಯಲ್ಲಿ ಆಪಾದಿಸಿರುವ 1ನೇ ಕಾಮಗಾರಿಯಾದ 2016-17ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿಯಲ್ಲಿ ಗುತ್ತಿದುರ್ಗ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಚಿಕ್ಕರಕೆರೆ-ಚದುರಗೊಳ್ಳ ಕೆರೆ ಹಂಚಿನ ನಕಾಶೆಯಲ್ಲಿ ರಂಗಪ್ಪನ ಜಮೀನಿನವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಅಲ್ಲಿಯ ಗ್ರಾಮಪಂಚಾಯ್ತಿಯ ಸದಸ್ಯರಾದ ನೀಲಪ್ಪ ಕೋಂ ನಿಂಗಪ್ಪ ಎಂಬುವವರು ಸೇರಿಕೊಂಡು ಯಂತ್ರಗಳಿಂದ ಮಾಡಿಸಿ ಅದನ್ನು ಕೂಲಿ ಕಾರ್ಮಿಕರು ಮಾಡಿದಂತೆ ದಾಖಲೆ ಸೃಷ್ಟಿಸಿಕೊಂಡಿರುವುದು ಹಾಗೂ ಇದರಲ್ಲಿ ಬಂಗಾರಮ್ಮ ಎಂಬುವವರು ದಿ.13/5/16 ರಂದು ಮೃತಪಟ್ಟಿದ್ದರೂ ಸಹ ಅವರಿಗೆ ಕೂಲಿ ಕೆಲಸ ನೀಡಿ ಅವರಿಗೆ ಹಣ ಪಾವತಿಸಿದಂತೆ ದಾಖಲಾತಿ ಸೃಷ್ಟಿಸಿರುತ್ತಾರೆ. ಅಲ್ಲದೆ ಬಂಗಾರಮ್ಮ, ಕೃಷ್ಣಪ್ಪ ಹಾಗೂ ರಾಜೇಂದ್ರ ಇವರುಗಳ ಕೂಲಿ ಹಣವನ್ನು ಗ್ರಾಮಪಂಚಾಯ್ತಿ ಸದಸ್ಯರಾದ ನೀಲಪ್ಪ ಇವರು ತಮ್ಮ ಖಾತೆಗೆ ಜಮಾ ಮಾಡಿಕೊಂಡು ಕೂಲಿ ಕಾರ್ಮಿಕರಿಗೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದು ವಿಚಾರಣಾಧಿಕಾರಿಯವರ ವಿಚಾರಣಾ ವರದಿಯಿಂದ ಕಂಡುಬರುತ್ತದೆ.

ii. ಅರ್ಜಿಯಲ್ಲಿ ಅಪಾದಿಸಿರುವ 2ನೇ ಕಾಮಗಾರಿಯಾದ ಚಿಕ್ಕ ಅರಕೆರೆ ಗ್ರಾಮದ ಚೌಡಮ್ಮ ಕೋಂ ಕೆಂಚಪ್ಪ ಇವರ ಜಮೀನಿನ ಹತ್ತಿರ ಫೀಡರ್ ಚಾನಲ್ ಕಾಮಗಾರಿ ಹಾಗೂ 3ನೇ ಕಾಮಗಾರಿಯಾದ ಚಿಕ್ಕ ಅರಕೆರೆ ಸ.ನಂ.78 ರ ಪಕ್ಕದಲ್ಲಿರುವ ಸರ್ಕಾರಿ ಹಳ್ಳ ಫೀಡರ್ ಚಾನಲ್ ಕಾಮಗಾರಿಗಳನ್ನು ಯಂತ್ರದ ಮೂಲಕ ಮಾಡಿಸಲು ಸಾಧ್ಯವಿರದೇ ಇದ್ದು, ಕೂಲಿ ಕಾರ್ಮಿಕರಿಂದ ಮಾಡಿಸಿರುವುದು ವಿಚಾರಣಾ ವರದಿಯಿಂದ ಕಂಡುಬಂದಿರುತ್ತದೆ.

iii. ವಿಚಾರಣಾಧಿಕಾರಿಯವರು ಕೋರಿರುವಂತೆ ಜಗಳೂರು ತಾಲ್ಲೂಕು, ಗುತ್ತಿದುರ್ಗ ಗ್ರಾಮಪಂಚಾಯಿತಿಯ ಪಿ.ಡಿ.ಓ. ಮರುಳಸಿದ್ದಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಹಾಗೂ ತಾಂತ್ರಿಕ ಸಹಾಯಕರಾದ ಹರೀಶ್ ಇವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ

4. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಲತಾ, ಗ್ರಾಮಪಂಚಾಯಿತಿಯ ಸದಸ್ಯರಾದ ನೀಲಪ್ಪ, ಇವರನ್ನು ಈ ಪ್ರಕರಣದ 4

ಮತ್ತು 5ನೇ ಎದುರುದಾರರನ್ನಾಗಿ ಮಾಡಿ, ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ 1, 3 ರಿಂದ 5ನೇ ಎದುರುದಾರರಿಗೆ ಆದೇಶಿಸಲಾಗಿತ್ತು.

5. ಸದರಿಯವರಿಗೆ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

6. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಗುತ್ತಿದುರ್ಗ ಗ್ರಾಮಪಂಚಾಯಿತಿ ಪಿ.ಡಿ.ಓ, ಮರುಳಸಿದ್ದಪ್ಪ ಇವರು ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಮತ್ತು ತಾಂತ್ರಿಕ ಸಹಾಯಕರಾದ ಹರೀಶ್‌ರವರೊಂದಿಗೆ ಸೇರಿಕೊಂಡು, ಎಂ.ಜಿಎನ್.ಆರ್.ಇ.ಜಿ.ಎ, ಯೋಜನೆಯಡಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಯಂತ್ರಗಳಿಂದ ಮಾಡಿಸಿ ಅದನ್ನು ಕೂಲಿ ಕಾರ್ಮಿಕರು ಮಾಡಿದಂತೆ ದಾಖಲೆ ಸೃಷ್ಟಿಸಿರುವುದು ಮತ್ತು ಬಂಗಾರಮ್ಮ ಎನ್ನುವವರು ದಿ.13/5/16 ರಂದು ಮೃತಪಟ್ಟಿದ್ದರೂ ಸಹ ಅವರಿಗೆ ಕೂಲಿ ಕೆಲಸ ನೀಡಿ ಹಣ ಪಾವತಿಸಿದಂತೆ ದಾಖಲೆ ಸೃಷ್ಟಿಸಿರುತ್ತಾರೆ. ಅಲ್ಲದೆ ಬಂಗಾರಮ್ಮ, ಕೃಷ್ಣಪ್ಪ ಹಾಗೂ ರಾಜೇಂದ್ರ ಇವರುಗಳ ಕೂಲಿ ಹಣವನ್ನು ಗ್ರಾಮಪಂಚಾಯಿತಿಯ ಸದಸ್ಯರಾದ ನೀಲಪ್ಪ ಇವರು ತಮ್ಮ ಖಾತೆ ಜಮಾ ಮಾಡಿಕೊಂಡಿರುತ್ತಾರೆಂದು ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಪರಿಶೀಲಿಸಿದಾಗ, 1, 3 ರಿಂದ 5ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಕಂಡುಬರುತ್ತಿರುವುದರಿಂದ, ದುರುಪಯೋಗವಾದ ಹಣವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 20/7/18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**